DEPARTMENT / SUBJECT:

NAME OF THE NEWS PAPER:     DATE: 29/11/19

# ಉದ್ಧವ್ ಠಾಕ್ರೆ, 6 ಸಚಿವರ ಪ್ರಮಾಣ

**ಮುಂಬೈ:** ಶಿವಸೇನಾ ವರಿಷ್ಠ ಉದ್ಧವ್ ಠಾಕ್ರೆ ಅವರು ಮಹಾರಾಷ್ಟ್ರದ 18ನೇ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ಶಿವಾಜಿಪಾರ್ಕ್‌ನಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಅವರು ಠಾಕ್ರೆ ಕುಟುಂಬದ ಮೊದಲ ವ್ಯಕ್ತಿಯಾಗಿ ಈ ಹುದ್ದೆಗೇರಿದರು. ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ ಅವರು ಪ್ರಮಾಣವಚನ ಬೋಧಿಸಿದರು.

ಕಾಂಗ್ರೆಸ್ ಪಕ್ಷದ ನಿತಿನ್ ರಾವತ್ ಹಾಗೂ ಬಾಳಾಸಾಹೇಬ್ ಥೋರಟ್; ಎನ್‌ಸಿಪಿಯಿಂದ ಭಗನ್ ಭುಜಬಲ್ ಮತ್ತು ಜಯಂತ್ ಪಾಟೀಲ್; ಶಿವಸೇನಾ ಪಕ್ಷದ ಸುಭಾಷ್ ದೇಸಾಯಿ ಹಾಗೂ ಏಕನಾಥ್ ಶಿಂದೆ ಅವರು ಉದ್ಧವ್ ಠಾಕ್ರೆ ಅವರ ಜತೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಗುರುವಾರ ಬೆಳಗ್ಗೆ ಸ್ವತಃ ಉದ್ಧವ್ ಠಾಕ್ರೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರವಾಣಿ ಮೂಲಕ ಕರೆ ಮಾಡಿ ಸಮಾರಂಭದಲ್ಲಿ ಭಾಗವಹಿಸುವಂತೆ ಆಮಂತ್ರಣ ನೀಡಿದ್ದರು. 9



### ಯಾರೆಲ್ಲ ಮಂತ್ರಿಗಳು?

**ಕಾಂಗ್ರೆಸ್**
ನಿತಿನ್ ರಾವತ್, ಬಾಳಾಸಾಹೇಬ್ ಥೋರಟ್

**ಎನ್‌ಸಿಪಿ**
ಭಗನ್ ಭುಜಬಲ್, ಜಯಂತ್ ಪಾಟೀಲ್

**ಶಿವಸೇನೆ**
ಸುಭಾಷ್ ದೇಸಾಯಿ, ಏಕನಾಥ್ ಶಿಂದೆ

### ಪ್ರಮುಖರು ಬರಲಿಲ್ಲ

ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮನಮೋಹನ್ ಸಿಂಗ್, ಮಮತಾ ಬ್ಯಾನರ್ಜಿ, ಅರವಿಂದ್ ಕೇಜ್ರಿವಾಲ್ ಮತ್ತಿತರ ಪ್ರಮುಖರಾರೂ ಕಾರ್ಯಕ್ರಮಕ್ಕೆ ಬಂದಿರಲಿಲ್ಲ. ರಾಜ್ ಠಾಕ್ರೆ; ಡಿಎಂಕೆ ಮುಖಂಡರಾದ ಎಂಕೆ ಸ್ಟಾಲಿನ್, ಟಿ.ಆರ್.ಬಾಲು; ಕಾಂಗ್ರೆಸ್ ನಾಯಕರಾದ ಅಹಮದ್ ಪಟೇಲ್, ಎನ್‌ಸಿಪಿ ನಾಯಕ ಪ್ರಫುಲ್ ಪಟೇಲ್, ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಮತ್ತಿತರರು ಭಾಗವಹಿಸಿದ್ದರು.

# ಉದ್ಧವ್ ಠಾಕ್ರೆ, 6 ಸಚಿವರ ಪ್ರಮಾಣವಚನ

← ಮೊದಲಪುಟದಿಂದ

ಟ್ವೀಟ್ ಮೂಲಕ ಉದ್ಧವ್‌ಗೆ ಪ್ರಧಾನಿ ಶುಭಾಶಯ ಕೋರಿದ್ದಾರೆ.

ದೇವೇಂದ್ರ ಫಡ್ನವಿಸ್ ಅವರು ಸಮಾರಂಭದ ಬಳಿಕ ಉದ್ಧವ್ ಹಾಗೂ ಅವರ ಪತ್ನಿ ವರ್ಷಾ ಬಳಿ ತೆರಳಿ ಶುಭಾಶಯ ತಿಳಿಸಿದ್ದು ವಿಶೇಷವಾಗಿತ್ತು. ಉದ್ಧವ್ ಠಾಕ್ರೆ ಶಿವಸೇನೆಯಿಂದ ಮುಖ್ಯಮಂತ್ರಿಯಾದ ಮೂರನೇ ವ್ಯಕ್ತಿಯಾಗಿದ್ದಾರೆ. ಈ ಹಿಂದೆ ಮನೋಹರ್ ಜೋಶಿ ಹಾಗೂ ನಾರಾಯಣ ರಾಣೆ ಈ ಸ್ಥಾನ ಅಲಂಕರಿಸಿದ್ದರು.

ಮಹಾರಾಷ್ಟ್ರದಲ್ಲಿ ವಿಧಾನಸಭೆ ಚುನಾವಣೆಯ ಫಲಿತಾಂಶ ಅಕ್ಟೋಬರ್ 24ರಂದು ಪ್ರಕಟವಾಗಿತ್ತು. ಆದರೆ ರಾಜಕೀಯ ಬಿಕ್ಕಟ್ಟಿನಿಂದಾಗಿ ಸಾಕಷ್ಟು ವಿಳಂಬವಾಗಿ ಉದ್ಧವ್ ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ.



### ಸಾಮಾನ್ಯ ಕಾರ್ಯಕ್ರಮ

ಇದಕ್ಕೂ ಮುನ್ನ ಮೈತ್ರಿ ಸರಕಾರದ ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ಬಿಡುಗಡೆ ಮಾಡಿತು. ಅದರಲ್ಲಿ 'ಜಾತ್ಯತೀತ' ಪದ ಸೇರಿಸುವ ಬಗ್ಗೆ ಶಿವಸೇನೆ ಕೊಸರಾಡಿ ಕೊನೆಗೂ ಒಪ್ಪಿಗೆ ನೀಡಿದೆ. ರೈತರ ಕಲ್ಯಾಣ, ನಿರುದ್ಯೋಗ ಸಮಸ್ಯೆ ನಿವಾರಣೆಗೆ ಆದ್ಯತೆ ಇತ್ಯಾದಿ ವಿಷಯಗಳು ಇದರಲ್ಲಿ ಸೇರಿವೆ.